**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ ಮೂಡಿಗೆರೆ**

**ಸಿ.ಸಿ.ನಂಬರ್‌ಃ115/2020**

ಸಿಡಬ್ಲ್ಯೂಃ 1
ಪಿಡಬ್ಲ್ಯೂಃ 1

| | | |
|---|---|---|
| ಸಾಕ್ಷಿಯ ಹೆಸರು | : | ಬಿ. ಮುರುಗೇಶ |
| ತಂದೆಯ ಹೆಸರು | : | ಲೇಟ್ ವೆಂಕಟಸ್ವಾಮಿ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ನಿವೃತ್ತ ಶಿಕ್ಷಕ |
| ವಾಸಸ್ಥಳ | : | ನೆಹರು ರಸ್ತೆ, ಮೂಡಿಗೆರೆ |

ಇಂದು ದಿನಾಂಕಃ30.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

ಆರೋಪಿ ನನಗೆ ಗೊತ್ತು. ನಾನು ಚಿಕ್ಕಮಗಳೂರಿನ ಖಾಸಗಿ ಶಾಲೆಯಲ್ಲಿ ಶಿಕ್ಷಕನಾಗಿ ಉದ್ಯೋಗ ಮಾಡುತ್ತಿದ್ದ ಕಾರಣ ದಿನಾಂಕಃ06.11.2019 ರಂದು ಬೆಳಿಗ್ಗೆ 9 ಗಂಟೆಗೆ ಮೂಡಿಗೆರೆಯ ನನ್ನ ಮನೆಯಿಂದ ಹೋಗಿರುತ್ತೇನೆ. ಚಾಸಾ-2 ನನ್ನ ಹೆಂಡತಿ. ಅವರೂ ಸಹ ಖಾಸಗಿ ಶಾಲೆಯಲ್ಲಿ ಶಿಕ್ಷಕರಾಗಿದ್ದು, ಆ ದಿನ ಆಕೆಯು ತನ್ನ ಕೆಲಸಕ್ಕೆ ಹೋಗಿರುತ್ತಾರೆ. ಮಧ್ಯಾಹ್ನ 01.15 ಗಂಟೆಗೆ ಚಾಸಾ-3 ರವರೂ ಸಹ ಮಂಗಳೂರಿಗೆ ಕಾಲೇಜಿಗೆ ಹೋಗಿದ್ದರು. ಮನೆಯ ಬೀಗವನ್ನು ನನ್ನ ಅಕ್ಕನ ಮಗ ಅಂಗಡಿಗೆ ಕೊಟ್ಟು ಹೋಗಿದ್ದರು. ಸಂಜೆ 5.30 ಗಂಟೆಗೆ ನಾನು ಶಾಲೆಯಿಂದ ನಾನು ಹಿಂದಿರುಗಿ ಬಂದಾಗ, ಅಡುಗೆ ಮನೆಯ ಪೈಬರ್ ಶೀಟುಗಳು ಜಾರಿರುವುದು ಕಂಡುಬಂದಿರುತ್ತದೆ. ಸ್ವಲ್ಪ ಹೊತ್ತಿನ ನಂತರ 2 ಶೀಟುಗಳು ಜಾರಿ ಕೆಳಗೆ ಬಿದ್ದಿರುತ್ತವೆ. ಕೆಲಸದವರು ಯಾರು ಸಿಗಲಿಲ್ಲವೆಂದು ನಾನು ಅವುಗಳನ್ನು ಹಾಗೇ ಬಿಚ್ಚಿ ಇಟ್ಟಿದ್ದೆ. ದಿನಾಂಕಃ10.11.2019 ರಂದು ಹಣದ ಅವಶ್ಯಕತೆ ಇದ್ದಾಗ, ಚಾಸಾ-3 ರವರ ಕೋಣೆಯಲ್ಲಿದ್ದ ಬೀರುವನ್ನು ನೋಡುವಾಗ, ಬೀರುವಿನ ಒಳಭಾಗ ಬೀಗ ಹಾಕಿತ್ತು. ಆದರೆ ಒಳಭಾಗದ ಲಾಕರನ್ನು ಮೀಟಿ ತೆಗೆಯಲಾಗಿತ್ತು. ಸದರಿ ಲಾಕರನ್ನು ತೆಗೆದುನೋಡಲಾಗಿ ಸುಮಾರು 20 ಸಾವಿರದಷ್ಟು ಹಣ ಹಾಗೂ ಒಟ್ಟು 109 ಗ್ರಾಂನಷ್ಟು ಚಿನ್ನದ ಆಭರಣಗಳು ಕಾಣೆಯಾಗಿದ್ದವು. ಕಾರಣಾಂತರಗಳಿಂದ ನಾನು ಆ ದಿನ ದೂರು ನೀಡಲು ಸಾಧ್ಯವಾಗಲಿಲ್ಲ. ದಿನಾಂಕಃ11.11.2019 ರಂದು ಘಟನೆಯ ಸಂಬಂಧ ಮೂಡಿಗೆರೆ ಪೊಲೀಸ್ ಠಾಣೆಯಲ್ಲಿ ನಾನು ದೂರು ದಾಖಲಿಸಿರುತ್ತೇನೆ. ಆ ದಿನ ಸಂಜೆ 7.45 ಗಂಟೆಗೆ ಚಾಸಾ-27 ಮತ್ತು ಇತರೆ ಪೊಲೀಸರ್ ಅದಿಕಾರಿಗಳು ಬಂದು ಸಂಜೆ 7.45 ರಿಂದ 8.30 ರ ಅವದಿಯಲ್ಲಿ ಸ್ಥಳ ಪರಿಶೀಲನೆ ಮಾಡಿ ಮಹಜರು ಮಾಡಿರುತ್ತಾರೆ. ಆ ಸಂದರ್ಭದಲ್ಲಿ ನಾನು, ಚಾಸಾ-12 ಮತ್ತು 13 ಇದ್ದೇವು. ದಿನಾಂಕಃ04.01.2020 ರಂದು ಮೂಡಿಗೆರೆ ಪೊಲೀಸ್ ಠಾಣೆಯಿಂದ ದೂರವಾಣಿ ಕರೆ ಮಾಡಿ ಕಳ್ಳತನ ಮಾಡಿದ ವ್ಯಕ್ತಿ ಸಿಕ್ಕಿರುತ್ತಾನೆ ಎಂದು ತಿಳಿಸಿದರು. ಆಗ ಪೊಲೀಸ್ ಠಾಣೆಗೆ ಹೋಗಿ

ನೋಡಲಾಗಿ ನಮ್ಮ ಮನೆಯಲ್ಲಿ ಗಾರೆ ಕೆಲಸ ಮಾಡುತ್ತಿದ್ದ 1 ನೇ ಆರೋಪಿ ರವರು ಕಳ್ಳತನ ಮಾಡಿದ ಬಗ್ಗೆ ನನಗೆ ತಿಳಿಯಿತು. ಪೊಲೀಸರು ನನ್ನ ಮುಂದೆ ಆತನನ್ನು ವಿಚಾರಿಸಲಾಗಿ, ಆತ ಮನೆಯ ಹಂಚನ್ನು ತೆಗೆದು, ಶೀಟುಗಳನ್ನು ಜಾರಿಸಿ, ಚಾಸಾ-3 ರವರ ಕೋಣೆಯಲ್ಲಿದ್ದ ಬೀಗದ ಕೈಯಿಂದ ಬೀರುವನ್ನು ತೆಗೆದು, ಅದರಲ್ಲಿದ್ದ ಒಡವೆಗಳನ್ನು ಕಳ್ಳತನ ಮಾಡಿದ ಬಗ್ಗೆ ಒಪ್ಪಿಕೊಂಡಿರುತ್ತಾನೆ. ದಿನಾಂಕಃ22.01.2020 ರಂದು ಪೊಲೀಸರು ನನಗೆ ಶಿರಾ ನಗರಕ್ಕೆ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ. ಅದಕ್ಕಿಂತ ಮೊದಲು 1 ನೇ ಆರೋಪಿ ಆಭರಣಗಳನ್ನು ಎಲ್ಲಿ ಅಡ ಇಟ್ಟಿದ್ದಾರೆ ಎಂದು ತಿಳಿಸಿದರು. ಕಳ್ಳತನ ಮಾಡಿದ 1 ನೇ ಆರೋಪಿ ಧರ್ಮಸ್ಥಳಕ್ಕೆ ಹೋಗಿ ಅಲ್ಲಿಂದ ಮಂಗಳೂರಿನ ಸುರತ್ಕಲ್ ಗೆ ಹೋಗಿ ಅಲ್ಲಿ ಸ್ಮಶಾನದಲ್ಲಿ ಹೆಣ ಸುಡುವ ಕಾವೇರಪ್ಪ ಎಂಬುವವರ ಬಳಿ ಮಗುವಿಗೆ ಆರೋಗ್ಯ ಸರಿ ಇಲ್ಲ ಎಂದು ಕೆಲವು ಒಡವೆಗಳನ್ನು ನೀಡಿ ಹಣ ಪಡೆದಿರುತ್ತಾರೆ. ಅಲ್ಲಿಂದ ಶಿವಮೊಗ್ಗ ಹಾಗೂ ಹುಬ್ಬಳ್ಳಿಗೆ ಹೋಗಿ ಸದರಿ ಹಣದಿಂದ ಇಸ್ಪಿಟು ಆಡಿ ಹಣ ಕಳೆದುಕೊಂಡಿದ್ದು ಪುನಃ ಹಣದ ಅವಶ್ಯಕತೆ ಉಂಟಾದಾಗ ಗೌರಿಬಿದನೂರಿಗೆ ಹೋಗಿ, ವೆಂಕಟೇಶ್ ಎಂಬ ವ್ಯಕ್ತಿಯನ್ನು ಬೇಟಿಯಾಗಿ ಅವನ ಹತ್ತಿರ 2 ಜೊತೆ ಒಲೆ ಮತ್ತು ಉಂಗುರವನ್ನು ನೀಡಿ ಮನೆ ಬಾಡಿಗೆ ಕೊಡಿಸುವಂತೆ ಕೇಳಿರುತ್ತಾರೆ. 1 ನೇ ಆರೋಪಿಯ ತನ್ನ ಕೀಪ್ಯಾಡ ಮೊಬೈಲನ್ನು ವೆಂಕಟೇಶರವರಿಗೆ ನೀಡಿರುತ್ತಾರೆ. ಸದರಿ ಮೊಬೈಲ್ ಮತ್ತು ಒಡವೆಗಳನ್ನು ತೆಗೆದುಕೊಂಡು ಹೋದ ವೆಂಕಟೇಶ ಮತ್ತೆ ಸಿಕ್ಕಿರುವುದಿಲ್ಲ. ಮತ್ತೆ ಗೌರಿಬಿದನೂರಿನ ಕೆಲವು ಅಂಗಡಿಯಲ್ಲಿ ಒಡವೆಗಳನ್ನು ಅಡ ಇಟ್ಟಿರುತ್ತಾರೆ. ನಂತರ ಕುಣಿಗಲ್ ನ ತಾಂಡವೇಶ್ವರ ಜುವೆಲರ್ಸ್ ನಲ್ಲಿ ಸಹ ಕೆಲವು ಆಭರಣಗಳನ್ನು ಅಡ ಇಟ್ಟಿರುತ್ತಾರೆ. ತದನಂತರ ಶಿರಾ ಪಟ್ಟಣದ ರಾಘವೇಂದ್ರ ಮಠದ ಆರೋಪಿ2 ರವರ 50 ಗ್ರಾಂನಷ್ಟು ಚಿನ್ನವನ್ನು ಅಡ ವಿಟ್ಟು ಸುಮಾರು 40 ಸಾವಿರ ಹಣ ಪಡೆದಿರುತ್ತಾರೆ. ತದನಂತರ ಆಟೋದವರಿಗೆ 1 ಸಾವಿರ ಹಣ ನೀಡಿ ಅಲ್ಲಿಂದ ಹೋಗಿರುತ್ತಾರೆ. ಎಲ್ಲಾ ಹಣ ಖರ್ಚಾದ ನಂತರ ಶಿವಮೊಗ್ಗಕ್ಕೆ ಹೋಗಿ ಅಲ್ಲಿಂದ ಹಾಸನಕ್ಕೆ ಬಂದು ರೈಲ್ವೆ ನಿಲ್ದಾಣದಲ್ಲಿ ಉಳಿದುಕೊಂಡಿರುತ್ತಾರೆ. ಮರುದಿನ ಹಾಸನದ ಮುಖ್ಯರಸ್ತೆಯ ಹಿಂದೂಸ್ತಾನ ಗೋಲ್ಡ್ ಕಂಪನಿಗೆ 35.600 ಗ್ರಾಂ ಚಿನ್ನದ ಬಳೆಗಳನ್ನು ಅಡ ಇಡಲು ಹೋದಾಗ ಸಾಲ ನೀಡಲು ಸಾಕ್ಷಿಯನ್ನು ಕೇಳಿರುತ್ತಾರೆ. ಆಗ 1 ನೇ ಆರೋಪಿಯು ತಮ್ಮ ಸಂಬಂಧಿಕರ ಪೋನು ನಂಬರನ್ನು ಅವರಿಗೆ ನೀಡಿದ್ದು, ಅವರು ಕರೆ ಮಾಡಿದಾಗ, ಆ ಆಭರಣಗಳು ಕಳ್ಳತನ ಮಾಡಿದ ಆಭರಣಗಳು ಎಂದು ಕಂಡುಬಂದಿರುತ್ತದೆ. ತಕ್ಷಣವೇ ಸದರಿ ಕಂಪನಿಯವರು ಪೊಲೀಸ್ ಠಾಣೆಗೆ ದೂರು ನೀಡಿರುತ್ತಾರೆ. ಅಲ್ಲಿಂದ ಮೂಡಿಗೆರೆ ಪೊಲೀಸರು 1 ನೇ ಆರೋಪಿಯನ್ನು ಬಂಧಿಸಿರುತ್ತಾರೆ. ಪೊಲೀಸರು ಆರೋಪಿಯನ್ನು ಗುರುತಿಸಲು ಹೇಳಿದಾಗ, 1 ನೇ ಆರೋಪಿಯೇ ಕಳ್ಳತನ ಮಾಡಿದ್ದು ಎಂದು ನನಗೆ ಕಂಡುಬಂದಿರುತ್ತದೆ. ನಾನು ನೀಡಿದ ದೂರಿನ ಆಧಾರದ ಮೇಲೆ ಮೂಡಿಗೆರೆ ಪೊಲೀಸ್ ಠಾಣೆ ಪೊಲೀಸರು ಹಳೇ ಅಂಗಡಿ ಕಾಳಿಕಾಂಬ ಜುವೆಲರ್ಸ್‌ನಿಂದ ಅಡವಿಟ್ಟ ಒಡವೆಗಳ ಬದಲಾಗಿ 13 ಗ್ರಾಂನ ಚಿನ್ನದ ಗಟ್ಟಿಯನ್ನು ನೀಡಿರುತ್ತಾರೆ. 1 ನೇ ಆರೋಪಿಯ ಹೇಳಿಕೆಯ ಮೇರೆಗೆ ನಾನು ಮತ್ತು ಮೂಡಿಗೆರೆ

ಪೊಲೀಸರು 2 ನೇ ಆರೋಪಿಯ ಮಾಲೀಕತ್ವದ ಬಾಲಾಜಿ ಜುವೆಲರ್ಸ್ ಗೆ ಹೋದಾಗ ಸಿ.ಸಿ.ಟಿವಿಯ ಯಾವುದೇ ಪೂಟೇಜುಗಳನ್ನು ನೀಡಿರುವುದಿಲ್ಲ. ದಿನಾಂಕಃ21.02.2021 ರಂದು ಸದರಿ ಸ್ಥಳದಲ್ಲಿ ಮಹಜರು ಮಾಡಿರುತ್ತಾರೆ. ಆ ಕಾಲಕ್ಕೆ ನಾನು, ಚಾಸಾ-14 ಮತ್ತು 12 ರವರು ಇದ್ದರು. 2 ನೇ ಆರೋಪಿ ಆ ಕಾಲಕ್ಕೆ ಯಾವುದೇ ವಸ್ತುಗಳನ್ನು ತಾನು 1 ನೇ ಆರೋಪಿಯಿಂದ ಅಡವು ಇಟ್ಟುಕೊಂಡಿಲ್ಲ ಎಂದು ಹೇಳಿಕೆ ನೀಡಿರುತ್ತಾರೆ. ಎರಡನೇ ಬಾರಿಯು ನಾವು ಪೊಲೀಸರು ಸಮಕ್ಷಮ ಹೋದಾಗಲೂ ಸಹ 2 ನೇ ಆರೋಪಿ ಯಾವುದೇ ವಸ್ತುಗಳನ್ನು ಅಡವು ಇಟ್ಟುಕೊಂಡಿಲ್ಲ ಎಂದು ಹೇಳಿರುತ್ತಾರೆ. ಆದರೆ 1 ನೇ ಆರೋಪಿ ಅದೇ ಅಂಗಡಿಯಲ್ಲಿ 40 ಸಾವಿರ ತೆಗೆದುಕೊಂಡಿರುವುದಾಗಿ ಹೇಳಿಕೆ ನೀಡಿರುತ್ತಾರೆ. ನನ್ನ ದೂರಿಗೆ ಸಂಬಂದಿಸಿದಂತೆ ದಿನಾಂಕಃ24.11.2020 ರಂದು ಕಳುವಾದ ವಸ್ತುಗಳ ಬಗ್ಗೆ ಮರು ಹೇಳಿಕೆ ನೀಡಿರುತ್ತೇನೆ. ನನ್ನ ದೂರಿನಲ್ಲಿ ನಾನು 109 ಆಭರಣಗಳು ಕಳ್ಳತನವಾದ ಬಗ್ಗೆ ನಾನು ಹೇಳಿದ್ದೆ. ನಂತರ ಪರಿಶೀಲಿಸಿದಾಗ 151 ಗ್ರಾಂ ಚಿನ್ನ ಕಳ್ಳತನವಾಗಿರುವುದು ಕಂಡುಬಂದಿರುತ್ತದೆ. ಆ ಕುರಿತು ನನ್ನ ಮರುಹೇಳಿಕೆಯಲ್ಲಿ ಹೇಳಿರುತ್ತೇನೆ. ದಿನಾಂಕಃ12.02.2020 ರಂದು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ, ಈ ಪ್ರಕರಣದಲ್ಲಿ ಜಪ್ತಾದ ಆಭರಣಗಳನ್ನು ನನ್ನ ಮಧ್ಯಂತರ ವಶಕ್ಕೆ ಪಡೆದುಕೊಂಡಿರುತ್ತೇನೆ. ಸಾಕ್ಷಿಯು ತಾವು ನೀಡಿದ ದೂರು, ಪ್ರಥಮ ವರ್ತಮಾನ ವರದಿ, ಸ್ಥಳ ಮಹಜರು, ಆ ಕಾಲಕ್ಕೆ ತೆಗೆದು 4 ಫೋಟೋಗಳು, ದಿನಾಂಕಃ22.01.2020 ರ ಪಂಚನಾಮೆ, ಆ ಕಾಲಕ್ಕೆ ತೆಗೆದ 2 ಫೋಟೋಗಳು, ಅಪ್ರೈಸಲ್ ವರದಿ ಹಾಗೂ ಅವುಗಳ ಮೇಲಿನ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ, ಸದರಿ ದಾಖಲೆಗಳನ್ನು ನಿಪಿ-1 ರಿಂದ 11 ಹಾಗೂ ಸಾಕ್ಷಿಯ ಸಹಿಗಳನ್ನು ನಿಪಿ-1 ಎ ರಿಂದ 3 ಎ, 8 ಎ ಮತ್ತು 11 ಎ ಎಂದು ಗುರುತಿಸಲಾಯಿತು. ಸಾಕ್ಷಿಯು 5 ಫೋಟೋಗಳನ್ನು ನೋಡಿ ಗುರುತಿಸಿ ಅದರಲ್ಲಿ ಕಾಣುವ ಆಭರಣಗಳನ್ನು ನಾನು ನ್ಯಾಯಾಲಯದ ಮಧ್ಯಂತರ ಆದೇಶದಂತೆ ವಶಕ್ಕೆ ಪಡೆದಿರುತ್ತೇನೆ ಮತ್ತು ಅವುಗಳನ್ನೇ 1 ನೇ ಆರೋಪಿ ನಮ್ಮ ಮನೆಯಿಂದ ಕಳ್ಳತನ ಮಾಡಿದ್ದು ಎಂದು ನುಡಿಯುತ್ತಾರೆ. ಸದರಿ ಫೋಟೋಗಳನ್ನು ನಿಪಿ-12 ರಿಂದ 16 ಮತ್ತು ಅದಕ್ಕೆ ಸಂಬಂದಿಸಿದ ಸಿ.ಡಿ.ಯನ್ನು ನಿಪಿ-17 ಎಂದು ಗುರುತಿಸಲಾಯಿತು. 1 ಮತ್ತು 3 ನೇ ಆರೋಪಿಗಳನ್ನು ನೋಡಿದರೆ ನಾನು ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ** 2 ನೇ ಆರೋಪಿ ಪರ ಶ್ರೀ ಎಂ.ವಿ.ಜೆ. ವಕೀಲರಿಂದಃ

1. ನನಗೆ ತೊಂದರೆಯಾದಲ್ಲಿ ತಕ್ಷಣ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಬೇಕೆಂಬ ಜ್ಞಾನ ನನಗೆ ಇದೆ. ನಮ್ಮ ಮನೆಯಲ್ಲಿದ್ದ ಬೆಳೆಬಾಳುವ ವಸ್ತುಗಳನ್ನು ಪ್ರತಿ ದಿನ ಪರಿಶೀಲಿಸುತ್ತಿರಲಿಲ್ಲ. ಬೆಲೆಬಾಳುವ ವಸ್ತುಗಳನ್ನು ಮನೆಯಲ್ಲಿಟ್ಟಾಗ ಅದನ್ನು ಇಟ್ಟಿದ್ದ ಬೀರು ಅಥವಾ ಯಾವುದೇ ಇನ್ನಿತರ ವಸ್ತುವಿನ ನಾನು ತೆಗೆದುಕೊಂಡು ಹೋಗುತ್ತೇನೆ ಎಂದರೆ ಸರಿ. ವಸಂತ ಎಂಬುವವರಿಗೆ ನೀಡಿದ ಕೀಯನ್ನು ಪೊಲೀಸರು ನನ್ನ ಸಮಕ್ಷಮ ಜಪ್ತು ಮಾಡಿಕೊಂಡಿಲ್ಲ. ಸದರಿ ಕೀಯನ್ನು ದಿನಾಂಕಃ06.11.2019 ರಂದು ನನ್ನ ವಶಕ್ಕೆ ತೆಗೆದುಕೊಂಡಿರುತ್ತೇನೆ ಎಂದರೆ ಸರಿ. ಅದು ವಾರದ

ಬುಧವಾರವಾಗಿತ್ತು. ಆ ದಿನ ನಾನು ಕರ್ತವ್ಯಕ್ಕೆ ಹೋಗಿದ್ದೆ. ನಿಪಿ-1 ದೂರಿನಲ್ಲಿ ನಾನು ಆ ದಿನ ಕರ್ತವ್ಯ ಹೋಗಿರುವ ಬಗ್ಗೆ ನಮೂದಿಸಿದ್ದೇನೆ. ಕಳ್ಳತನವಾದ ಚಿನ್ನಾಭರಣಗಳು ನನಗೆ ಸೇರಿದ್ದು ಎಂದು ತೋರಿಸಲು ಪೊಲೀಸರಿಗೆ ಯಾವುದೇ ಬಿಲ್ಲುಗಳನ್ನು ನೀಡಿಲ್ಲ. ಮನೆಯಲ್ಲಿ ವಸ್ತುಗಳು ಕಳ್ಳತನವಾದ ವಿಚಾರ ಗೊತ್ತಾದ ತಕ್ಷಣ ನಾನು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿಲ್ಲ ಎಂದರೆ ಸರಿ. ನನ್ನ ಮನೆಯಿಂದ ಮೂಡಿಗೆರೆ ಪೊಲೀಸ್ ಠಾಣೆ ಅರ್ಧ ಕಿಲೋಮೀಟರ್ ದೂರದಲ್ಲಿದೆ. ನಾನು ಕರ್ತವ್ಯ ಮುಗಿಸಿ ವಾಪಾಸು ಹೋಗುವಾಗ ಮೂಡಿಗೆರೆ ಪೊಲೀಸ್ ಠಾಣೆ ಮುಂಬಾಗವೇ ನಮ್ಮ ಮನೆಗೆ ಹೋಗಬೇಕು ಎಂದರೆ ಸರಿ.

2. ತನಿಖಾ ಅವದಿಯಲ್ಲಿ ಸಹ ಪೊಲೀಸರಿಗೆ ಚಿನ್ನದ ಆಭರಣಗಳು ನನ್ನದು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನೀಡಿಲ್ಲ. ನಾನು ಶಿಕ್ಷಕನಾದ ಕಾರಣ ನನ್ನ ಯಾವುದೇ ವಸ್ತುಗಳು ಕಳೆದು ಹೋದರೆ ಆ ಬಗ್ಗೆ ನಿಖರವಾಗಿ ದೂರಿನಲ್ಲಿ ನಮೂದಿಸುತ್ತೇನೆ ಎಂದರೆ ಸರಿ. ಯಾವುದೇ ದಾಖಲಾತಿಗಳನ್ನು ಬರೆದು ಅದರಲ್ಲಿ ತಪ್ಪುಗಳು ಆದರೆ ಆ ಬಗ್ಗೆ ನನ್ನ ಸಣ್ಣ ಸಹಿ ಮಾಡುತ್ತೇನೆ ಎಂದರೆ ಸರಿ. ನಿಪಿ-1 ದೂರಿನಲ್ಲಿ ತಿದ್ದುಪಡಿ ಮಾಡಿ ನನ್ನ ಸಣ್ಣ ಸಹಿ ಮಾಡಿಲ್ಲ. ನಿಪಿ-1 ದೂರಿನಲ್ಲಿ 4 ಕಡೇ ತಿದ್ದುಪಡಿಗಳಾಗಿವೆ ಎಂದರೆ ಸರಿ. ಅಲ್ಲಿ ನನ್ನ ಸಣ್ಣ ಸಹಿಗಳನ್ನು ಮಾಡಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ ಇರುವ ಒಕ್ಕಣೆ ಒಂದು ಶಾಹಿಯಲ್ಲಿ ಬರೆದಿದ್ದು ಹಾಗೂ ತಿದ್ದುಪಡಿಯಾದ ಸಂಗತಿಗಳು ಮತ್ತೊಂದು ಶಾಹಿಯಲ್ಲಿ ಬರೆಯಲಾಗಿದೆ ಎಂದರೆ ಸರಿ. ನಾನು ಕೊಟ್ಟ ದೂರಿನಲ್ಲಿ 2 ಗ್ರಾಂ ತೂಕದ ಒಂದು ಜೊತೆ ಚಿನ್ನದ ಜುಮುಕಿ ಎಂದು ಬರೆದಿರುತ್ತೇನೆ ಎಂದರೆ ಸರಿ. ಅದರ ಮೇಲೆ ಬೇರೆ ಶಾಹಿಯಲ್ಲಿ ತಿದ್ದುಪಡಿ ಮಾಡಿ 6 ಗ್ರಾಂ ಎಂದು ಬರೆಯಲಾಗಿದೆ ಎಂದರೆ ಸರಿ.

3. ನಾನು ದೂರನ್ನು ನಿಧಾನವಾಗಿ ಎಲ್ಲ ವಿಚಾರಗಳನ್ನು ತಿಳಿದುಕೊಂಡು ಒಂದೂವರೆ ದಿನ ಬಿಟ್ಟು ನೀಡಿದ್ದೇನೆ ಎಂದರೆ ಸರಿ. ನನ್ನ ಮನೆಯಲ್ಲಿ 150 ಗ್ರಾಂ ಚಿನ್ನ ಕಳ್ಳತನವಾಗಿದ್ದರೆ ಆ ಬಗ್ಗೆ ದೂರಿನಲ್ಲಿ ನಿಖರವಾಗಿ ನಮೂದಿಸುತ್ತಿದ್ದೆ ಎಂದರೆ ಸಾಕ್ಷಿಯು ದೂರು ನೀಡುವಾಗ ಪೊಲೀಸರು ಬೀರುವನ್ನು ಮುಟ್ಟಬೇಡಿ ಬೆರಳಚ್ಚು ಬೀಳುವ ಸಾಧ್ಯತೆ ಇರುತ್ತದೆ ಎಂದು ಹೇಳಿದ ಕಾರಣ ನಿಖರವಾಗಿ ಎಷ್ಟು ಕಳ್ಳತನವಾಗಿದೆ ಎಂದು ದೂರಿನಲ್ಲಿ ನಮೂದಿಸಲಾಗಿಲ್ಲ ಎಂದು ನುಡಿಯುತ್ತಾರೆ. ನನ್ನ ಮರುಹೇಳಿಕೆಯಲ್ಲಿ ಆ ವಿಚಾರವನ್ನು ನಾನು ಹೇಳಿ ಬರೆಸಿಲ್ಲ. ದೂರು ಕೊಡುವ ಪೂರ್ವದಲ್ಲಿ ನಾನು ಮತ್ತು ನನ್ನ ಹೆಂಡತಿ ಬೀರುವನ್ನು ಮುಟ್ಟಿ ಅದರಲ್ಲಿರುವ ವಸ್ತುಗಳನ್ನು ತೆಗೆದಿರುತ್ತೇವೆ ಎಂದರೆ ಸರಿ.

4. 2 ನೇ ಆರೋಪಿಯನ್ನು ಈ ಪ್ರಕರಣದಲ್ಲಿ ಸಿಕ್ಕಿಹಾಕಿಸುವ ಉದ್ದೇಶದಿಂದ ನಮ್ಮ ಮನೆಯಿಂದ 150 ಗ್ರಾಂ ಚಿನ್ನ ಕಳ್ಳತನವಾಗಿದೆ ಎಂದು ಪೊಲೀಸರು ನನ್ನ ಮರು ಹೇಳಿಕೆ ಪಡೆದಿರುತ್ತಾರೆ ಎಂದರೆ ಸರಿ. ನಾನು ಶಿರಾಗೆ ಹೋಗಿದ್ದಾಗ 2 ನೇ ಆರೋಪಿ ಮತ್ತು ನನ್ನನ್ನು ನಿಲ್ಲಿಸಿ ಫೋಟೋ

ತೆಗೆದಿರುತ್ತಾರೆ. ಶಿರಾಕ್ಕೆ ಹೋಗಿದ್ದ ದಿನ ವಾರದ ಯಾವ ದಿನ ಎಂದರೆ ಸಾಕ್ಷಿಯು ಭಾನುವಾರ ಎಂದು ನುಡಿಯುತ್ತಾರೆ. ಆ ದಿನ ಸ್ಥಳೀಯ ಪೊಲೀಸರನ್ನು ಪೊಲೀಸರು ಕರೆಸಿರಲಿಲ್ಲ. ಆ ಸಂದರ್ಭದಲ್ಲಿ ಯಾವುದೇ ಬರವಣಿಗೆ ಮಾಡಿಲ್ಲ ಆರೋಪಿಯ ಸಹಿ ಪಡೆದುಕೊಂಡು ಫೋಟೋ ತೆಗೆದ ಬಗ್ಗೆ ನನಗೆ ನೆನಪಿಲ್ಲ. ಯಾವುದೇ ಆಭರಣಗಳನ್ನು ಆ ಬಗ್ಗೆ ರಿಜಿಸ್ಟರ್ ಮತ್ತು ಬಿಲ್ಲುಗಳಲ್ಲಿ ನಮೂದು ಇರುತ್ತದೆ ಎಂದರೆ ಸರಿ. ಆ ರೀತಿ ಅಡವಿಟ್ಟ ವಸ್ತುಗಳ ಬಗ್ಗೆ ಮೂಲ ಬಿಲ್ಲನ್ನು ಅಡವಿಡುವವರಿಗೆ ಕೊಟ್ಟು ನಕಲು ಪ್ರತಿಯನ್ನು ಅಂಗಡಿಯವರು ಇಟ್ಟುಕೊಳ್ಳುತ್ತಾರೆ ಎಂದರೆ ಸರಿ. ನನ್ನ ಸಮಕ್ಷಮ 1 ನೇ ಆರೋಪಿಯ 2 ನೇ ಆರೋಪಿಯ ಅಂಗಡಿಗೆ ಸಂಬಂದಿಸಿದ ಯಾವುದೇ ಬಿಲ್ಲನ್ನು ನೀಡಿಲ್ಲ. 2 ನೇ ಆರೋಪಿಯ ಅಂಗಡಿಯಲ್ಲಿದ್ದ ಬಿಲ್ಲು ಮತ್ತು ರಿಜಿಸ್ಟರ್ ಗಳನ್ನುನನ್ನ ಸಮಕ್ಷಮ ಪೊಲೀಸರು ಪರಿಶೀಲಿಸಿರುತ್ತಾರೆ. ಅಲ್ಲಿ 1 ನೇ ಆರೋಪಿ ಕಳ್ಳತನ ಮಾಡಿದ ಆಭರಣಗಳನ್ನು ಅಡವಿಟ್ಟ ಬಗ್ಗೆ ನಮೂದು ಇರಲಿಲ್ಲ.

5. 2 ನೇ ಆರೋಪಿಯು ಸಹಕರಿಸದ ಕಾರಣ ಸ್ಥಳೀಯ ಪೊಲೀಸರನ್ನು ಕರೆಸಿ ಆ ಅಂಗಡಿಯ ಸಿ.ಸಿ.ಟಿವಿ ಪೂಟೇಜುಗಳನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿರುತ್ತಾರೆ, ಆದರೆ 2 ನೇ ಆರೋಪಿಯು ಅದನ್ನ ನಿರಾಕರಿಸಿರುತ್ತಾರೆ. 2 ನೇ ಆರೋಪಿ ಸಿ.ಸಿ.ಟಿವಿ ಕೆಟ್ಟುಹೋಗಿದೆ ಎಂದು ಹೇಳಿದ ಕಾರಣ ಯಾವುದೇ ಪೂಟೇಜುಗಳನ್ನು ತೆಗೆದುಕೊಂಡಿಲ್ಲ. ಸದರಿ ಕೆಟ್ಟುಹೋಗಿದ್ದ ಬಗ್ಗೆ ಪೊಲೀಸರು ಪರಿಶೀಲಿಸಿರುತ್ತಾರೆ. ಆ ಬಗ್ಗೆ ಮಹಜರಿನಲ್ಲಿ ನಮೂದಿಸಿದ ಬಗ್ಗೆ ನಾನು ನೋಡಿಲ್ಲ. 2 ನೇ ಆರೋಪಿಯ ಅಂಗಡಿಯ ಚಕ್ಕುಬಂದಿ ಪೂರ್ವಕ್ಕೆ ರಾಘವೇಂದ್ರ ಮಠ, ಪಶ್ಚಿಮ ಅಂಗಡಿಯ ಸಾಲುಗಳು, ದಕ್ಷಿಣಕ್ಕೆ ರಸ್ತೆ ಮತ್ತು ಮಾರುಕಟ್ಟೆ, ಉತ್ತರಕ್ಕೆ ಅಂಗಡಿಗಳ ಸಾಲು ಬರುತ್ತದೆ. ನಾವು ಹೋದಾಗ ಅಲ್ಲಿ ಸ್ಥಳೀಯರು ಬಹಳ ಜನ ಇದ್ದರು. ಸದರಿ ಜನರು ಸಹ ಪೊಲೀಸರ ವಿರುದ್ದ ಗಲಾಟೆ ಮಾಡಿರುತ್ತಾರೆ. ಆ ಸಂಬಂಧ ಪೊಲೀಸರು ದೂರು ನೀಡಿಲ್ಲ, ಆದರೆ ಕೇವಲ ಅದು ಬಾಯಿಮಾತಿನ ಜಗಳವಾಗಿತ್ತು. 2 ನೇ ಆರೋಪಿ ತನಿಖಾದಿಕಾರಿಗಳ ಜೊತೆ ದ್ವನಿ ಏರಿಸಿ ಮಾತನಾಡಿರುತ್ತಾರೆ.

6. 2 ನೇ ಆರೋಪಿಯ ಅಂಗಡಿಗೆ 1 ನೇ ಆರೋಪಿಯ ಹೇಳಿಕೆಯ ಮೇರೆಗೆ ಹೋಗಿದ್ದು ಆ ಕಾಲಕ್ಕೆ 1 ನೇ ಆರೋಪಿಯು 40 ಸಾವಿರ ಬೆಲೆಬಾಳುವ ಅಭರಣಗಳನ್ನು ಮಾರಾಟ ಮಾಡಿರುವುದಾಗಿ ತೋರಿಸಿರುತ್ತಾರೆ ಎಂಬುದು ಸುಳ್ಳು ಎಂದರೆ ಸರಿಯಲ್ಲ. ಯಾವುದೇ ಸಿಮೆಂಟ್ ಶೀಟುಗಳು ಛಾವಣಿಯಿಂದ ಕೆಳಗೆ ಬಿದ್ದರೆ ತುಂಡಾಗುತ್ತವೆ ಎಂದರೆ ಸಾಕ್ಷಿಯು ನಮ್ಮ ಮನೆಯಲ್ಲಿ ಫೈಬರ್ ಶೀಟುಗಳು ಅಳವಡಿಸಿದ್ದೇವು ಎಂದು ನುಡಿಯುತ್ತಾರೆ. ನನ್ನ ದೂರಿನಲ್ಲಿ ಫೈಬರ್ ಶೀಟು ಎಂದು ನಮೂದಿಸಿಲ್ಲ. ಸದರಿ ಫೈಬರ್ ಶೀಟುಗಳನ್ನು ಪೊಲೀಸರು ಸ್ಥಳ ಪಂಚನಾಮೆಯ ಕಾಲಕ್ಕೆ ಜಪ್ತು ಮಾಡಿಕೊಂಡಿಲ್ಲ. ಚಿನ್ನದ ಅಭರಣಗಳನ್ನು ಇಟ್ಟ ಬೀರುವನ್ನು ಪೊಲೀಸರು ಜಪ್ತು ಮಾಡಿಕೊಂಡಿಲ್ಲ. ಚಿನ್ನದ ಇಟ್ಟಿದ ಬೀರುವಿಗೆ ಯಾವುದೇ ಜಖಂ ಆಗಿರಲಿಲ್ಲ ಎಂದರೆ ಸರಿ. ಪೊಲೀಸರು ತನಿಖಾವದಿಯಲ್ಲಿ

ವಸಂತರವರನ್ನು ಕರೆಸಿ ನನ್ನ ಸಮಕ್ಷಮ ವಿಚಾರಣೆ ಮಾಡಿಲ್ಲ. ಸಾಮಾನ್ಯವಾಗಿ ಬೆಲೆಬಾಳುವ ವಸ್ತುಗಳನ್ನು ಇಟ್ಟರೇ ಅವುಗಳನ್ನು ಜೋಪಾನ ಮಾಡಿ ಇಡುತ್ತಾರೆ ಎಂದರೆ ಸರಿ. 2 ನೇ ಆರೋಪಿಯನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಹಾಗೂ ನನ್ನ ಮನೆಯಲ್ಲಿ ಕಳ್ಳತನವಾದ ವಸ್ತುಗಳಿಗೂ ಹಾಗೂ ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಯಿಂದ ಅಕ್ರಮವಾಗಿ ಚಿನ್ನ ಪಡೆದುಕೊಳ್ಳುವ ಉದ್ದೇಶದಿಂದ ನಾನು ಪೊಲೀಸರೊಂದಿಗೆ ಶಾಮೀಲಾಗಿ ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ನನ್ನ ಸಮಕ್ಷಮ 2 ನೇ ಆರೋಪಿಯ ಅಂಗಡಿಯಲ್ಲಿ ಚಿನ್ನ ಅಭರಣಗಳನ್ನು ಮಾರಾಟ ಮಾಡಿದ ಬಗ್ಗೆ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಪಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ